**ಸಾಕ್ಷಿಯನ್ನು ದಿನಾಂಕ 23.04.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಕಳೆದ 3-4 ವರ್ಷಗಳಿಂದ ನನ್ನ ಮಗ ಮೃತ ಸಿದ್ದಪ್ಪರವರು ವಿ.ಆರ್.ಎಲ್ ಕಂಪನಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ವಿ.ಆರ್.ಎಲ್ ಲಾರಿಯನ್ನು ಕಂಪನಿಗೆ ಹಿಂತಿರುಗಿ ತರುತ್ತಿದ್ದಾಗ ಅಪಘಾತ ಆಗಿರುತ್ತದೆ. ನನ್ನ ಮಗನ ಕರ್ತವ್ಯದ ಅವಧಿಯಲ್ಲಿ ಅಪಘಾತ ಆಗಿರುತ್ತದೆ.

ನನ್ನ ಮಗನ ಆದಾಯವನ್ನು ವಿ.ಆರ್.ಎಲ್ ಕಂಪನಿಯವರು ಆತನ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದರು. ನನ್ನ ಮಗನಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಿರೂರ ಶಾಖೆಯಲ್ಲಿ ಖಾತೆ ಇತ್ತು. ನನ್ನ ಮಗನಿಗೆ ತಿಂಗಳಿಗೆ ರೂ.30 ಸಾವಿರ ಆದಾಯ ಇದ್ದು ದಿನಭತ್ಯೆ ರೂ.250/- ಇತ್ತು ಎಂದು ತೋರಿಸಲು ದಾಖಲೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನನ್ನ ಮಗನಿಗೆ ತಿಂಗಳಿಗೆ ರೂ.30 ಸಾವಿರ ಆದಾಯ ಮತ್ತು ರೂ.250/- ದಿನಭತ್ಯೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಮ್ಮ ಮಗನ ಹೆಸರಿನಲ್ಲಿ ಇ.ಎಸ್.ಐ ಕಾರ್ಡ್ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ತಮ್ಮ ಸೊಸೆಯ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ನನ್ನ ಮಗನ ಮರಣದ ಸಂಬಂಧ ವಿ.ಆರ್.ಎಲ್ ಕಂಪನಿಯಿಂದ ನನಗೆ ಮತ್ತು ನನ್ನ ಸೊಸೆಗೆ ತಲಾ ರೂ.10.50 ಲಕ್ಷವನ್ನು ಪರಿಹಾರವಾಗಿ ನೀಡಿರುತ್ತಾರೆ. ಸದರಿ ಪರಿಹಾರವನ್ನು ವಿ.ಆರ್.ಎಲ್ ಕಂಪನಿಯವರು ಇ.ಎಸ್.ಐ ರವರಿಂದ ಕೊಡಿಸಿರುತ್ತಾರೆ. ನನ್ನ ಮಗ ಕರ್ತವ್ಯದ ಅವಧಿಯಲ್ಲಿ ಮರಣ ಹೊಂದಿದ್ದರಿಂದ ಅವರು ಇ.ಎಸ್.ಐ ವ್ಯಾಪ್ತಿಯೊಳಗೆ ಬರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಇ.ಎಸ್.ಐ ವ್ಯಾಪ್ತಿಯೊಳಗೆ ಬರುವುದರಿಂದ ಪ್ರಸ್ತುತ ...

-ಅರ್ಜಿ ಊರ್ಜಿತವಲ್ಲ ಅಂದರೆ ಸರಿಯಲ್ಲ. ನಾವು ಈಗಾಗಲೇ ವಿ.ಆರ್.ಎಲ್ ಕಂಪನಿಯ ಮೂಲಕ ಇ.ಎಸ್.ಐನಿಂದ ಪರಿಹಾರದ ಹಣ ಪಡೆದುಕೊಂಡಿರುವುದರಿಂದ ಈ ಅರ್ಜಿ ಮೂಲಕ ಮತ್ತೊಮ್ಮೆ ಪರಿಹಾರ ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ಅಪಘಾತಪಡಿಸಿದ ಲಾರಿ ಚಾಲಕನಿಗೆ ಡಿ.ಎಲ್ ಇರಲಿಲ್ಲ ಅಂದರೆ ಸರಿ. ಈ ಬಗ್ಗೆ ಸಂಬಂಧಪಟ್ಟ ಪೊಲೀಸರು ತನಿಖೆ ಮಾಡಿ ಲಾರಿ ಚಾಲಕನ ವಿರುದ್ಧ ಡಿ.ಎಲ್ ಇರುವುದಿಲ್ಲ ಎಂದು ಸಹ ಅಂತಿಮ ವರದಿ ಸಲ್ಲಿಸಿದ್ದು ಡಿ.ಎಲ್ ಇಲ್ಲದ ವ್ಯಕ್ತಿಗೆ ಚಾಲನೆ ಮಾಡಲು ಲಾರಿ ನೀಡಿದಕ್ಕಾಗಿ ಅದರ ಮಾಲೀಕನ ವಿರುದ್ಧವೂ ಅಂತಿಮ ವರದಿ ಸಲ್ಲಿಸಿರುತ್ತಾರೆ ಅಂದರೆ ಸರಿ. 1ನೇ ಎದುರುದಾರರು ವಿಮಾ ಷರತ್ತಿನ ಉಲ್ಲಂಘನೆ ಮಾಡಿರುವುದರಿಂದ 2ನೇ ಎದುರುದಾರರು ಪರಿಹಾರ ಪಡೆಯಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. ಅಪಘಾತಪಡಿಸಿದ ಲಾರಿಗೆ ಪರ್ಮಿಟ್ ಮತ್ತು ಎಫ್.ಸಿ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ.

ಅಪಘಾತ ರಸ್ತೆಯ ನಡುಭಾಗದಲ್ಲಿ ಆಗಿರುತ್ತದೆ ಅಂದರೆ ರಸ್ತೆಯ ಬದಿಯಲ್ಲಿ ಆಗಿರುತ್ತದೆ. ಅಪಘಾತಕ್ಕೆ ನನ್ನ ಮಗನ ತಪ್ಪು ಸಹ ಕಾರಣವಾಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಮಗನ ಅಂತಿಮ ಸಂಸ್ಕಾರಕ್ಕೆ ರೂ.50 ಸಾವಿರ ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2ನೇ ಎದುರುದಾರರು ನಮಗೆ ಪರಿಹಾರ ನೀಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ನನ್ನ ಸಾಕ್ಷ್ಯ ವಿಚಾರಣೆ ನನ್ನ ಕಾರಣದಿಂದ ವಿಳಂಬವಾಗಿರುತ್ತದೆ ಅಂದರೆ ಸರಿಯಲ್ಲ. ಆ ಕಾರಣದಿಂದ ಪರಿಹಾರ ಹಣದ ಮೇಲೆ ಬಡ್ಡಿ ನೀಡಲು ಎದುರುದಾರರು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದ**

1 ನೇ ಎದುರುದಾರರ ವಾಹನದಿಂದ ಅಪಘಾತವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಅಪಘಾತಪಡಿಸಿತು ಎನ್ನಲಾದ ವಾಹನದ ಎಲ್ಲಾ ದಾಖಲೆಗಳು ಸರಿಯಾಗಿ ಇದ್ದುದ್ದರಿಂದ 1 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.